ದಿನಾಂಕ 22-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲುಃ ಶ್ರೀ. ಎಸ್. ಬಿ. ಆರ್ ವಾದಿ ಪರ ವಕೀಲರಿಂದಃ-**

1. ವಾದಿಯಾ ಏತಕ್ಕಾಗಿ ದಾವೆ ಹಾಕಿದ್ದಾರೆ ಎಂಬುದು ನನಗೆ ಗೊತ್ತು. ದಾವಾ ಸ್ವತ್ತುಗಳಲ್ಲಿ ನನ್ನ ಭಾಗ ಬಂದಿಲ್ಲ, ಭಾಗ ಬರಬೇಕು ಎಂದು ಕೇಸು ಹಾಕಿದ್ದಾರೆ ಎಂದರೆ ಹೌದು. ವಾದಿಯೂ ದೊಡ್ಡಪ್ಪಯ್ಯಾ ಅಲಿಯಾಸ್ ಮುನಿ ಹನುಮಪ್ಪ ರವರ ಮಗ ದೊಡ್ಡ ರಾಮಯ್ಯ ರವರ ಮಗಳು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಹನುಮಯ್ಯ ರವರ ಮಗಳು ಎಂದು ಹೇಳುತ್ತಾರೆ. ದಾವಾ ಆಸ್ತಿಗಳು ಎಲ್ಲವೂ ವಾದಿ ಮತ್ತು ಪ್ರತಿವಾದಿ 1 ರಿಂದ 7 ರವರ ಒಟ್ಟು ಕುಟುಬಂದ ಆಸ್ತಿ ಎಂದರೆ ಸಾಕ್ಷಿಯು ಸ್ವಯಾರ್ಜಿತ ಆಸ್ತಿ ಎನ್ನುತ್ತಾರೆ. ಆಸ್ತಿಗಳು ಯಾರ ಸ್ವಯಾರ್ಜಿತ ಆಸ್ತಿ ಎಂದರೆ ಹನುಮಯ್ಯ ರವರ ಸ್ವಯಾರ್ಜಿತ ಆಸ್ತಿಗಳು. ಸದರಿ ವಿಷಯವಾಗಿ ದಾಖಲೆಗಳನ್ನು ನಾನು ನೋಡಿದ್ದೇನಾ ಎಂದರೆ 1954 ರಲ್ಲಿ ಅವರು ಖರೀದಿಸಿರುತ್ತಾರೆ ಎನ್ನುತ್ತಾರೆ. 1954 ರಲ್ಲಿ ಯಾವ ಆಸ್ತಿ ಹನುಮಯ್ಯ ರವರು ಖರೀದಿ ಮಾಡಿದ್ದರು ಎಂದರೆ ಸರ್ವೆ ನಂ.88 ರ ಸ್ವತ್ತನ್ನು ಖರೀದಿಸಿರುತ್ತಾರೆ. 1954 ರಲ್ಲಿ ಸರ್ವೆ ನಂ.88 ಎನ್ನುವ ಆಸ್ತಿ ಇರಲಿಲ್ಲ ಎಂದರೆ ಆವಾಗ ಸರ್ವೆ ನಂಬರ್ ಬೇರೆ ಇತ್ತು. ಸದರಿ ಬೇರೆ ನಂಬರ್ ನ್ನು ಹೇಳಲು ಆಗುತ್ತದೆಯಾ ಎಂದರೆ ಇಲ್ಲ. ಹನುಮಯ್ಯ ರವರ ಸ್ವಯಾರ್ಜಿತ ಆಸ್ತಿ ಎಂದು ನನಗೆ ಯಾರು ಹೇಳಿದರು ಎಂದರೆ ನಾನು ದಾಖಲೆಗಳನ್ನು ನೋಡಿದ್ದೇನೆ. ಹನುಮಯ್ಯ ರವರು ಆ ಸಮಯದಲ್ಲಿ ಏನಾದರೂ ಬೇರೆ ಕೆಲಸ ಮಾಡುತ್ತಿದ್ದರಾ ಎಂದರೆ ವ್ಯವಸಾಯ ಮಾಡುತ್ತಿದ್ದರು ಬೇರೆ ಆದಾಯ ಇರಲಿಲ್ಲ.

2. ನಾನು ಯಾರ ಕಡೆಯಿಂದ ಜಮೀನಿನನ್ನು ಖರೀದಿಸಿದ್ದೇನೆ ಎಂದರೆ ಹನುಮಯ್ಯ ಉರುಫ್ ದೊಡ್ಡಪ್ಪಯ್ಯ ರವರಿಂದ ಖರೀದಿಸಿರುತ್ತೇನೆ. ಯಾವ ಖರೀದಿ ಮಾಡಿದಿರಿ

ಎಂದರೆ 23-06-1984 ರಲ್ಲಿ ಖರೀದಿ ಮಾಡಿರುತ್ತೇನೆ. ಸದರಿ ಖರೀದಿ ಪತ್ರಕ್ಕೆ ಹನುಮಯ್ಯ ಮಾತ್ರ ಸಹಿ ಮಾಡಿದಾರಾ ಎಂದರೆ ಅವರ ನಾಲ್ಕು ಜನ ಮಕ್ಕಳಾದ ಯರ್ರಪ್ಪ ಮತ್ತು ಇತರರು ಸಹಿ ಮಾಡಿರುತ್ತಾರೆ. ಯಾವೂದಾದರೂ ಆಸ್ತಿ ಸ್ವಯಾರ್ಜಿತ ಇದ್ದಾಗ ಅವರ ಮಕ್ಕಳ ಸಹಿ ಬೇಕಾಗಿರುವುದಿಲ್ಲ ಎಂದರೆ ಹೌದು. ಹೆಣ್ಣು ಮಕ್ಕಳಿಗೆ ಬೇಕಾಗಿಲ್ಲ. ಸರ್ವೆ ನಂ.88 ರ ಆಸ್ತಿಯೂ ಹನುಮಯ್ಯ ನವರ ಗಂಡು ಮಕ್ಕಳ ಮಾತ್ರ ಸಹಿ ಪಡೆದುಕೊಂಡು, ಹೆಣ್ಣು ಮಕ್ಕಳನ್ನು ಬಿಟ್ಟು ಮಾಡಿಕೊಂಡಿರುತ್ತಾರೆ ಎಂದರೆ ಹೌದು ಗಂಡು ಮಕ್ಕಳು ಮಾತ್ರ ಸಹಿ ಮಾಡಿರುತ್ತಾರೆ. ಸರ್ವೆ ನಂ.88 ಸ್ವತ್ತು ಒಟ್ಟು ಕುಟುಂಬದ ಆಸ್ತಿ ಆಗಿರುವುದರಿಂದ ವಾದಿಗೂ ಕೂಡ ಇದರಲ್ಲಿ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ಹೆಣ್ಣು ಮಕ್ಕಳಿಗೆ ಭಾಗ ಕೊಡಬೇಕಾಗುತ್ತದೆ ಎಂದು ನಾನು ಭಾಗ ಇಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

3. ಓ ಎಸ್ ನಂ.241/2008 ಎಂದು ನಾನು ಹೇಳಿರುವ ಕೇಸಿನಲ್ಲಿ ವಾದಿಯು ಕೇಸು ಹಾಕಿಲ್ಲ, ಅದನ್ನು ಸಂಪಂಗಿ ರಾಮಯ್ಯ, ಕೃಷ್ಣಪ್ಪ , ಶ್ರೀನಿವಾಸಪ್ಪ ಮತ್ತು ಆಂಜಮ್ಮ ಎನ್ನುವವರು ಹಾಕಿದ್ದಾರೆ ಎಂದರೆ ಸರಿ. ಸದರಿ ಕೇಸಿನಲ್ಲಿ ಕೃಷ್ಣಮ್ಮ ಈ ಕೇಸಿನ ವಾದಿಯನ್ನು ಓ ಎಸ್ ನಂ.241/2008 ರಲ್ಲಕಕಿ 5 ನೇ ಪ್ರತಿವಾದಿಯಾಗಿ ಮಾಡಿರುತ್ತಾರೆ ಎಂದರೆ ಇರಬಹುದು. ಓ ಎಸ್ ನಂ.241/2008 ಕೇಸು ಇನ್ನು ಇತ್ಯರ್ಥ ಅಗಿಲ್ಲ ಎಂದರೆ ಆಗಿದೆ. ಸದರಿ ಕೇಸಿನಲ್ಲಿ ತೀರ್ಪು ಯಾವಾಗ ಆಯಿತು ಎಂದರೆ ನನಗೆ ನೆನಪಿಲ್ಲ. ಸದರಿ ಕೇಸಿನಲ್ಲಿ ತೀರ್ಪು ಆಗಿಲ್ಲ, ಅದು ವಾದಿಯ ತಪ್ಪಿನ ಕಾರಣ ವಜಾ ಆಗಿರುತ್ತದೆ ಎಂದರೆ ಇರಬಹುದು.

4. ಓ ಎಸ್ ನಂ.334/2007 ಎಂಬ ಕೇಸಿನ ದಾಖಲಾತಿಗಳನ್ನು ನಾನು ಸಲ್ಲಿಸಿದ್ದು, ಅದರಲ್ಲಿ ವಾದಿಯು ಪಾರ್ಟಿ ಇಲ್ಲಿ ಎಂದರೆ ಇದ್ದಾರೆ. ಸದರಿ ದಾವೆಯಲ್ಲಿರುವ ಯಾವುದೇ

ಪ್ರತಿವಾದಿಗೂ ಮತ್ತು ಈ ಕೇಸಿನ ವಾದಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಎಲ್ಲ ಅವರ ಮನೆಯವರೇ.

5. ನಾನು ಖರೀದಿ ಮಾಡಿರುವ ಜಮೀನಿನಲ್ಲಿ ವಾದಿಗೂ ಹಕ್ಕು ಮತ್ತು ಅಧಿಕಾರ ಇರುವುದರಿಂದ ನಾವು ಮಾಡಿಕೊಂಡ ಕ್ರಯ ಪತ್ರ ಕಾನೂನು ಬಾಹಿರವಾಗಿದೆ ಎಂದರೆ ಸರಿಯಲ್ಲ. ವಾದಿಗೆ ದಾವಾ ಆಸ್ತಿಯಲ್ಲಿ ಭಾಗ ಕೊಡಬೇಕೆಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲಃ</u>-**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.

PW3 is present and is fully cross examined by the defendant counsel. Plaintiff counsel submits no further plaintiff evidence. Hence, plaintiff side evidence is closed.

Case is posted for defendant evidence by 20-09-2025.

**Addl. Civil Judge & JMFC.,**
**Chintamani.**